# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 01-10-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಸದಸ್ಯರು,**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶ್ರೀಕಾಂತ್.ಕೆ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್.ಎಸ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27/100
4. ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ,
5. ಶ್ರೀ ಅಮಿತ್ ನಿಗ್ಲಿ, ಸ್ಥಳೀಯರು, ಬಾಣಸವಾಡಿ
6. ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ,

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಶ್ರೀ ಮಂಜುನಾಥ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
2. ಶ್ರೀ ಆನಂದ್, ಕಿರಿಯ ಆರೋಗ್ಯ ನಿರೀಕ್ಷಕರು
3. ಶ್ರೀ ರಾಜೇಶ್, ಮಾರ್ಷಲ್, ಬಿಬಿಎಂಪಿ,
4. ಶ್ರೀ ಕೆ.ಶಿವಯ್ಯ, ಕೆಲಸ ಪರಿವೀಕ್ಷಕರು,
5. ಶ್ರೀ ಮುಕುಂದಯ್ಯ, ಎ.ಎಸ್.ಐ, ಬಾಣಸವಾಡಿ ಪೊಲೀಸ್ ಠಾಣೆ (ಸಂಚಾರ)
6. ಶ್ರೀ ಪ್ರತಾಪ್, ಬಾಣಸವಾಡಿ ಪೊಲೀಸ್ ಠಾಣೆ (ಸಂಚಾರ) ಸಿಬ್ಬಂದಿ
7. ಶ್ರೀ ದಯಾನಂದ, ಬೀದಿ ದೀಪ ಸೂಪರ್‌ವೈಸರ್

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು, ಮಾಜಿ ಪಾಲಿಕೆ ಸದಸ್ಯರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ಓ.ಎಂ.ಬಿ ಆರ್ ಲೇಔಟ್, 1ನೇ ಎ ಅಡ್ಡರಸ್ತೆಯಲ್ಲಿ ಭಾರೀ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲುಗಡೆ ಮಾಡುತ್ತಿದ್ದು, ಇದರಿಂದ ಲಘು ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಗೆ ತಿಳಿಸಿದರು. | ಬಾಣಸವಾಡಿ ಪೊಲೀಸ್ ಠಾಣೆ (ಸಂಚಾರ)<br><br>ಸಭೆಯಲ್ಲಿ ಹಾಜರಿದ್ದ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರವರು ಮಾತನಾಡಿ, ಈ ಬಗ್ಗೆ ಕೂಡಲೇ ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. |
| 2 | ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ಓ.ಎಂ.ಬಿ.ಆರ್ ಲೇಔಟ್, 2ನೇ ಅಡ್ಡರಸ್ತೆಯಲ್ಲಿ ರಸ್ತೆ ಹಂಪ್ ಮೇಲೆ ಬಳೆದಿರುವ ಬಣ್ಣವು ಅಳಿಸಿಹೋಗಿದ್ದು, ಇದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಕಂಡು ಬಂದಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಹಂಪ್ ಗೆ ಬಣ್ಣ ಬಳಿಯಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP**<br><br>ಸದರಿ ರಸ್ತೆಯಲ್ಲಿ ರಸ್ತೆ ಹಂಪ್‌ಗೆ ಬಣ್ಣ ಬಳಿಯಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು. |

| | | |
|---|---|---|
| 3 | ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ಓ.ಎಂ.ಬಿ.ಆರ್ ಲೇಔಟ್, 2ನೇ ಡಿ ಅಡ್ಡರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ.146 ರ ಮಾಲೀಕರು ಬೆಂಗಳೂರು ನೀರು ಸರಬರಾಜು ಮಂಡಳಿಯು ಸರಬರಾಜು ಮಾಡುವ ಪೈಪ್ ಲೈನ್ ಗೆ ಸೆಕ್ಷನ್ ಪೈಪ್ ಅಳವಡಿಸಿದ್ದು, ಇದರಿಂದ ಸಾರ್ವಜನಿಕರಿಗೆ ಸಮರ್ಪಕವವಾಗಿ ನೀರು ಸರಬರಾಜು ಆಗದೇ ಇರುವುದರಿಂದ ಸದರಿ ಮಾಲೀಕರ ವಿರುದ್ಧ ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BWSSB**<br>ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ, ಮಾಲೀಕರ ವಿರುದ್ಧ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು. |
| 4 | ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ 80 ಅಡಿ ರಸ್ತೆಯಲ್ಲಿರುವ ಅನ್ನಪೂರ್ಣ ಭವನ ಹತ್ತಿರ ಎರಡು ಬೀದಿ ದೀಪಗಳು ಉರಿಯದೇ ಇರುವುದರಿಂದ ಈ ಪ್ರದೇಶದಲ್ಲಿ ರಾತ್ರಿ ಸಮಯದಲ್ಲಿ ಓಡಾಡುವ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | **ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ವಿಭಾಗ–ಪೂರ್ವ ವಲಯ**<br>ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ದಯಾನಂದ, ಬೀದಿ ದೀಪ ಸೂಪರ್‌ವೈಸರ್ ರವರಿಗೆ ಸದರಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ದುರಸ್ಥಿಪಡಿಸಲು ಸಭೆಯಲ್ಲಿ ತಿಳಿಸಲಾಯಿತು. |
| 5 | ಬಾಣಸವಾಡಿ ವ್ಯಾಪ್ತಿಯ 4ನೇ ಅಡ್ಡರಸ್ತೆ, ಓ.ಎಂ.ಬಿ.ಆರ್ ಲೇಔಟ್‌ನಲ್ಲಿ ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ರಸ್ತೆಯನ್ನು ಅಗೆದಿದ್ದು, ಅದನ್ನು ಪುನರ್ ನಿರ್ಮಾಣ ಮಾಡುವ ಕಾಮಗಾರಿಯನ್ನು ಮಾಡದೇ ಇರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಅದನ್ನು ಕೂಡಲೇ ಪುನರ್ ನಿರ್ಮಾಣ ಮಾಡಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 6 | ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ಮರಗಳ ಕೊಂಬೆ ರೆಂಬೆಗಳು ಮುರಿದು ಹೋಗಿದ್ದು, ಅವುಗಳನ್ನು ಕೂಡಲೇ ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಗೆ ತಿಳಿಸಿದರು. | (ವಲಯ ಅರಣ್ಯಾಧಿಕಾರಿಗಳು)<br>**(Forest Department)**<br>ವಾರ್ಡ್ ವ್ಯಾಪ್ತಿಯಲ್ಲಿರುವ ಹಳೆಯ ಮರದ ಕೊಂಬೆ ರೆಂಬೆಗಳನ್ನು ತೆರವುಗೊಳಿಸಲು ಕ್ರಮ ವಹಿಸುವುದು |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಮೂರು (03) ವಾರ್ಡ್ ಕಮಿಟಿ ಸಭೆಗಳಿಗೆ ಗೈರು ಹಾಜರಾಗಿರುವ ಬೃಹತ್ ನೀರುಗಾಲುವೆ, ಬೆಸ್ಕಾಂ, ತ್ಯಾಜ್ಯ ನೀರಿನ ನಿರ್ವಹಣೆ ಇಲಾಖೆಯವರು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

3/10/2022

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

3/10/22

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

**ಪ್ರತಿಯನ್ನು**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.